# ಬನ್ನಿ, ಒಂಚೂರು ಸ್ಮಾರ್ಟ್ ಆಗೋಣ

ಕಠಿಣ ಪರಿಶ್ರಮವನ್ನು ಜಗತ್ತು ಗುರ್ತಿಸುತ್ತದೆ. ಆದರೆ, ಯಶಸ್ಸಿಗೆ ಪರಿಶ್ರಮವಷ್ಟೇ ಸಾಲದು, ಕೆಲಸವನ್ನು ಸ್ಮಾರ್ಟ್ ಆಗಿ ಮಾಡುವುದು ಹೇಗೆ ಎನ್ನುವ ಅರಿವೂ ಅಗತ್ಯ.

■ ಡಾ. ಲಕ್ಷ್ಮಣ ವಿ.ಎ.





ನಮ್ಮೂರಿನಲ್ಲೊಬ್ಬ ಧೋಬಿ ಇದ್ದಾನೆ. ಈ ಧೋಬಿಯ ವಿಶೇಷ ಎಂದರೆ, ಅವನು ತನ್ನ ಪುಟ್ಟ ಗೂಡಂಗಡಿಯನ್ನು ಯಾವಾಗ ಮುಚ್ಚಿ ಯಾವಾಗ ತೆರೆಯುತ್ತಾನೆ ಎಂಬುದನ್ನು ಪ್ರತಿ ದಿನ ಅದೇ ರಸ್ತೆಯಲ್ಲಿ ಓಡಾಡುವ ನನಗೆ ತಿಳಿದಿಲ್ಲ. ರಾತ್ರಿ ಹನ್ನೆರಡು ಗಂಟೆಯಾದರೂ ಅವನ ಅಂಗಡಿಯ ಮುಂದೆ ಸಣ್ಣ ಹಾಸುಗಲ್ಲಿನ ಮೇಲೆ ಬಟ್ಟೆ ತೊಳೆಯುತ್ತಲೋ, ಇಸ್ತ್ರಿ ಮಾಡುತ್ತಲೋ ಅಥವಾ ಆರಿಹೋದ ತನ್ನ ಇದ್ದಿಲು ಇಸ್ತ್ರಿ ಪೆಟ್ಟಿಗೆಗೆ ಬೆಂಕಿ ಹಾಕಿ ಅದಕ್ಕೆ ರದ್ದಿ ಪೇಪರಿನಿಂದ ಗಾಳಿ ಹಾಕುತ್ತಲೋ ಇರುವಂತೆ ಕಾಣುತ್ತಾನೆ. ಬೆಳಿಗ್ಗೆ ಆರು ಗಂಟೆಗೆ ಹೋದರೆ ಇದೇ ಚಿತ್ರ. ಇಳಿ ಮಧ್ಯಾಹ್ನ ಹೋದರೂ ಅದೇ ಚಿತ್ರ. ಅಂದಾಜು ಅರವತ್ತೈದರಿಂದ ಎಪ್ಪತ್ತು ವರ್ಷ. ನಾನು ಈ ಊರಿಗೆ ಬಂದಾಗ ಹೇಗಿದ್ದನೋ ಹಾಗೆಯೇ ಇದ್ದಾನೆ. ಕಣ್ಣ ರೆಪ್ಪೆಯ ಮೇಲಿನ ಕೂದಲು ಈಗ ಸಂಪೂರ್ಣ ಬೆಳ್ಳಗಾಗಿವೆ. ಆರಂಭದಲ್ಲಿ ಒಂದು ಪ್ಯಾಂಟು ಶರ್ಟು ಇಸ್ತ್ರಿ ಮಾಡಲು ಎಂಟು ರೂಪಾಯಿ ಪಡೆಯುತ್ತಿದ್ದ. ಈಗ ಇಪ್ಪತ್ತು ರೂಪಾಯಿ ಪಡೆಯುತ್ತಾನೆ. ಆದರೆ ಇದರಿಂದಾಗಿ ಅವನ ಚಿಕ್ಕ ಗೂಡಂಗಡಿಯೇನೂ ಬದಲಾಗಿಲ್ಲ. ಅದೇ ಬಣ್ಣ ಮಾಸಿದ ಸೋರುವ ಗೂಡು, ಅದೇ ಮಾಸಿದ ಬಟ್ಟೆಯ ತಮಿಳು ತಾತ.

ಈಗ ಈ ತಾತನ ಗೂಡಂಗಡಿ ಇರುವ ರಸ್ತೆಗೆ ಎರಡು ದೊಡ್ಡ ದೊಡ್ಡ ರೋಲಿಂಗ್ ಶಟರ್‌ನ ಹೊಸ ಅಂಗಡಿಗಳೆದ್ದಿವೆ. ಕಳೆದ ಒಂದು ವರ್ಷದಿಂದೀಚೆ ಯಾರೋ ಒಬ್ಬರು ಈ ದೊಡ್ಡ ಅಂಗಡಿಯಲ್ಲಿ ಒಂದು ಡ್ರೈ ಕ್ಲೀನಿಂಗ್ ಲಾಂಡ್ರಿ ತೆರೆದಿದ್ದಾರೆ. ಮೊದಮೊದಲು ಒಂದೇ ಇದ್ದ ವಾಷಿಂಗ್ ಮಷಿನ್ನು, ಈಗ ಮೂರೋ ನಾಲ್ಕೋ ಆಗಿವೆ. ಈ ಲಾಂಡ್ರಿ ಶಾಪಿನಲ್ಲಿ ಮೂರು ಜನ ಹುಡುಗರು ಹಗಲೂ ರಾತ್ರಿ ಆ ಮಷಿನ್ನಿಗೆ ಬಟ್ಟೆ ಹಾಕುತ್ತಲೋ ವಿದ್ಯುತ್ ಚಾಲಿತ ಇಸ್ತ್ರಿ ಮಷೀನಿನಲ್ಲಿ ಕೆಲಸ ಮಾಡುತ್ತಲೋ ವ್ಯಸ್ತರಾಗಿರುತ್ತಾರೆ. ಒಂದು ಜೊತೆ ಬಟ್ಟೆಗೆ ಕ್ಲೀನಿಂಗ್–ಇಸ್ತ್ರಿ ಸೇರಿಸಿ ನೂರು ರೂಪಾಯಿ ಚಾರ್ಜು ಮಾಡುತ್ತಾರೆ.

‘ನಿಮ್ಮ ಓನರ್ ಎಲ್ಲಿದ್ದಾರಪ್ಪ?’ ಅಂತ ಕೇಳಿದರೆ ‘ಇಲ್ಲೆಲ್ಲೊ ಹೊಸ ರೋಡಿಗೋ ಬೊಮ್ಮನಹಳ್ಳಿಗೋ ಹೋಗಿದ್ದಾನೆ’ ಎಂದು ಕೆಲಸದ ಹುಡುಗರು ಹೇಳುತ್ತಾರೆ. ಅಸಲು ವಿಷಯ ಏನಪ್ಪ ಅಂದರೆ, ಆ ಓನರ್‌ದು ಮೂಲ ಕಸುಬು ಲಾಂಡ್ರಿ ಬಿಜಿನೆಸ್ ಅಲ್ಲ. ಅವರದು ರಿಯಲ್ ಎಸ್ಟೇಟ್ ಬ್ರೋಕರ್ ಕೆಲಸ. ಅವರ ಇನ್ನೊಂದು ಉಪ ಕಸುಬು, ಬೆಳೆಯುವ ಉಪನಗರಗಳಲ್ಲಿ ಅತ್ಯಾಧುನಿಕ ಡ್ರೈ ಕ್ಲೀನಿಂಗ್ ಅಂಗಡಿ ತೆರೆಯುವುದು.

ಇಲ್ಲಿ ಎರಡು ಚಿತ್ರಗಳು ನಿಮ್ಮ ಕಣ್ಣ ಮುಂದಿವೆ. ತಲೆ ತಲಾಂತರದಿಂದ ಹಗಲು ರಾತ್ರಿ ಒಂದು ಮಾಡಿ ದುಡಿಯುವ ಶ್ರಮಜೀವಿ ತಮಿಳು ತಾತನದು ಒಂದು ಚಿತ್ರವಾದರೆ, ಅತ್ಯಾಧುನಿಕ ಯಂತ್ರದ ಲಾಂಡ್ರಿಯವನದು ಇನ್ನೊಂದು.

ಒಬ್ಬನು ತನ್ನ ಕಠಿಣ ಶ್ರಮದಿಂದ ಬದುಕಲು ಹೆಣಗಾಡುತ್ತಿದ್ದರೆ, ಇನ್ನೊಬ್ಬ ಒಂದಿಷ್ಟು ಬಂಡವಾಳ ಹಾಕಿ ವ್ಯವಹಾರದಲ್ಲಿ ಸ್ಮಾರ್ಟ್ ಆಗಿದ್ದಾನೆ; ರಿಯಲ್ ಎಸ್ಟೇಟ್‌ನಲ್ಲಿ ಬಂಡವಾಳ ಹೂಡುವಷ್ಟು ಧನಿಕನಾಗಿದ್ದಾನೆ.

ಈಗ ಇನ್ನೊಂದು ಕತೆ ಹೇಳುವೆ.

ಒಂದು ಹಳ್ಳಿಯಲ್ಲಿ ಒಬ್ಬ ಕಲ್ಲುಕುಟಿಗ ಇರುತ್ತಾನೆ. ಬೆಳಗಾದರೆ ಬೆಟ್ಟಕ್ಕೆ ಹೋಗಿ ಬಂಡೆ ಒಡೆದು ಆರಡಿ ಅಳತೆಯ ಒಟ್ಟು ಐದಾರು ಕಲ್ಲು ತೆಗೆಯುತ್ತಾನೆ. ಆ ಕಲ್ಲುಗಳನ್ನು ಪೇಟೆಯ ಒಂದು ಅಂಗಡಿಗೆ ನೂರು ರೂಪಾಯಿಗೊಂದರಂತೆ ಮಾರಾಟ ಮಾಡುತ್ತಾನೆ. ಒಂದು ದಿನ ಯಾವುದೋ ಕಾರಣಕ್ಕೆ ಇವನೇ ಖುದ್ದು ಪೇಟೆಯ ಅಂಗಡಿಗೆ ಹೋದಾಗ, ಆ ಅಂಗಡಿಯಲ್ಲಿ ಕಲ್ಲಿನ ಶಿಲ್ಪ ನೋಡುತ್ತಾನೆ. ಮತ್ತು ಆ ಶಿಲ್ಪಗಳನ್ನು ಒಂದು ಗಾಡಿಗೆ ಲೋಡು ಮಾಡುತ್ತಿರುತ್ತಾರೆ. ಅಂಗಡಿಯಾತ ಸಾಕಷ್ಟು ದುಡ್ಡು ಪಡೆದಿದ್ದನ್ನು ಈ ಕಲ್ಲುಕುಟಿಗ ನೋಡಿ, ಕುತೂಹಲ ತಡೆಯಲಾರದೆ, ‘ಸ್ವಾಮಿ, ಈ ಶಿಲಾಮೂರ್ತಿಗಳನ್ನು ಮಾಡುವ ಕಲ್ಲು ಎಲ್ಲಿ ದೊರೆಯುತ್ತದೆ?’ ಎಂದು ಅಮಾಯಕನಂತೆ ಕೇಳುತ್ತಾನೆ. ಆಗ ಅಂಗಡಿಯವನು, ‘ನೀವೇ